**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 20-06-2018.**

ಮುಂದುವರೆದ ಪಾಟೀ ಸವಾಲು ಶ್ರಿ ಜಿ.ವಿ.ವಿ. ವಕೀಲರಿಂದ ಃ

ವಿಲ್ ನಲ್ಲಿರುವ ಚಕ್ ಬಂದಿ ಹಾಗೂ ಸ್ವತ್ತಿನ ಚಕ್ ಬಂದಿಯನ್ನು ವಾಸ್ತವಾಗಿ ಇದೆ ಎಂದು ಪರಿಶೀಲನೆ ಮಾಡಿ ತಿಳಿದುಕೊಂಡಿದ್ದೇನೆ. ನಂಜೇಗೌಡ ಉಃ ಪಾಪಣ್ಣ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ವಿಲ್ ಬರೆದುಕೊಡುವ ಕಾಲಕ್ಕೆ ನಂಜೇಗೌಡ ಉಃ ಪಾಪಣ್ಣ ತೀರಿಕೊಂಡಿದ್ದರು. ನಂಜೇಗೌಡ ಉಃ ಪಾಪಣ್ಣನಿಗೆ ಒಬ್ಬ ಮಗನಿದ್ದು ಆತ ಶಂಕರೇಗೌಡ. ಶಂಕರೇಗೌಡ ರವರನ್ನು

ಕ್ರಯಪತ್ರದಲ್ಲಿ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಬದಲಾವಣೆ ಮಾಡಿಕೊಡುವಂತೆ ಕೇಳಿಲ್ಲ ನಂಜೇಗೌಡ ಉಃ ಪಾಪಣ್ಣ ಕೆಂಪಮ್ಮನಿಗೆ ಕ್ರಯಪತ್ರ ಸೃಷ್ಟಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ ಕೆಂಪಮ್ಮನಿಗೆ 1999 ರಲ್ಲಿ ಯಾವುದೇ ವಿಲ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಶಂಕರೇಗೌಡ ರವರ ಆಸ್ತಿಗಳನ್ನು ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆ ಇಲ್ಲ.*

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ